ಇದು STAND UP COMEDY ಟೈಂ




ತೆಲುಗಿನಲ್ಲಿ ಹೆಸರು ಮಾಡಿರುವ 'ಮಹಾತಲ್ಲಿ' ಯೂಟ್ಯೂಬ್ ಹಾಸ್ಯದ ಚಾನಲ್ ಕಲಾವಿದರು

ಯೂ–ಟ್ಯೂಬ್‌ನಲ್ಲೂ ಜನಪ್ರಿಯರಾಗಿ ವರ್ಷಗಳೇ ಉರುಳಿವೆ.

ತಮಿಳು, ತೆಲುಗಿನಲ್ಲಿ ಕೂಡ ಯೂಟ್ಯೂಬ್ ಹಾಸ್ಯ ನಟ–ನಟಿಯರು ಸಿನಿಮಾ ಲೋಕ ಪ್ರವೇಶಿಸುವಷ್ಟು ಜನಪ್ರಿಯರಾಗಿದ್ದಾರೆ. 'ಪುಟ್ ಚಟ್ನಿ' ಎಂಬ ತಮಿಳು ಯೂಟ್ಯೂಬ್ ಚಾನೆಲ್‌ನಲ್ಲಿ ದೀಪ್ತಿ ಬ್ಲೆಸ್ಸಿ ಹಾಗೆ ಹೆಸರು ಮಾಡಿರುವವರು. 'ಇಳಯರಾಜಾ ನಮ್ಮ ಕೆಮಿಸ್ಟ್ರಿ ಟೀಚರ್ ಆದರೆ ಹೇಗಿರುತ್ತದೆ', 'ತಮಿಳು ಸಿನಿಮಾ ಹೀರೊ ಆಗುವುದು ಹೇಗೆ', 'ಭಾರತ ಹಾಗೂ ಪಾಕಿಸ್ತಾನ ರೂಮ್ ಮೇಟ್ಸ್ ಆಗಿದ್ದರೆ' ಎಂಬಂಥ ವಿಷಯಗಳನ್ನು ಒಳಗೊಂಡ ಹಾಸ್ಯ ಪ್ರಸಂಗಗಳನ್ನು 'ಪುಟ್ ಚಟ್ನಿ' ಒದಗಿಸಿದೆ. 'ಮಹಾತಲ್ಲಿ' ತೆಲುಗಿನಲ್ಲಿ ಹೆಸರು ಮಾಡಿರುವ ಯೂಟ್ಯೂಬ್ ಹಾಸ್ಯದ ಚಾನೆಲ್. ಜಾಹ್ನವಿ ದಾಶೆಟ್ಟಿ, ಸಾಯಿ ಸೋಮಯಾಜುಲು, ನಿಖಿಲ್ ವಿಜಯೇಂದ್ರ ಸಿಂಹ ಅಲ್ಲಿನ ಕಂತುಗಳ ಜನಪ್ರಿಯ ನಟ–ನಟಿಯರು. 'ಅಪಾರ್ಟ್‌ಮೆಂಟ್ ಮೀಟಿಂಗ್ಸ್', 'ಲಿಫ್ಟ್ ಸೀನ್ಸ್', 'ಡಾಡ್ಸ್ ಲಿಟ್ಲ್ ಪ್ರಿನ್ಸೆಸ್' ಹೀಗೆ ಅಲ್ಲಿನ ವಿಷಯಗಳಿವೆ.

ಬಹುತೇಕ ಯೂಟ್ಯೂಬರ್‌ಗಳು ನಗರ ಸಂವೇದನೆಯನ್ನೇ ಒಳಗೊಂಡ ಸ್ಕೆಚ್‌ಗಳನ್ನು, ಹಾಸ್ಯ ಪ್ರಸಂಗಗಳನ್ನು ಸೃಷ್ಟಿಸುತ್ತಾ ಬಂದಿದ್ದಾರೆ. ಹಾಗೆ ನೋಡಿದರೆ, ಕನ್ನಡದಲ್ಲಿ ಸ್ಟ್ಯಾಂಡ್–ಅಪ್ ಕಾಮಿಡಿ ಹಾಗೂ ಯೂಟ್ಯೂಬ್ ಹಾಸ್ಯಗಾರರು ಬೆರಳೆಣಿಕೆಯಷ್ಟು ಎನ್ನಬೇಕು. ವರ್ಷಗಳ ಹಿಂದೆ 'ಮಿಂಡ್ರಿ' ಎಂಬ ಚಾನೆಲ್ ಒಂದು ವಲಯದಲ್ಲಿ ಗುರುತಾಗಿತ್ತು. ಈಗ 'ನಮ್ದೂಕೆ' ಎಂಬ ಯೂಟ್ಯೂಬ್ ಚಾನೆಲ್ ಹಾಸ್ಯ ಪ್ರಸಂಗಗಳ ಮೂಲಕ ಕಚಗುಳಿ ಇಡಲು ಪ್ರಯತ್ನಿಸುತ್ತಿದೆ. 'ಲಾಲ್ ಬಾಗ್' ಎನ್ನುವುದು ಕನ್ನಡದಲ್ಲಿ ಜನಪ್ರಿಯವಾಗಿರುವ ಸ್ಟ್ಯಾಂಡ್–ಅಪ್ ಕಾಮಿಡಿ ತಂಡ.

ನಿಂತು ಅಥವಾ ಕುಂತು ನಗಿಸುವವರ ಪ್ರಸ್ತಾಪ ಆದಾಗಲೆಲ್ಲ ಚಾರ್ಲಿ ಚಾಪ್ಲಿನ್ ನೆನಪಾಗುತ್ತಾರೆ. ಮಾತನ್ನೇ ಅಳಿಸಿ, ಪ್ರಸಂಗಗಳ ಮೂಲಕ ಅವರು ಇಟ್ಟ ಕಚಗುಳಿ, ಚುಚ್ಚಿದ ವ್ಯಂಗ್ಯದ ಸೂಜಿಮೊನೆಯನ್ನು ಮರೆಯಲಾದೀತೆ? ಅಂಥದ್ದೇ ವ್ಯಂಗ್ಯ ಬೆರೆಸಿ, ಸಾಮಾಜಿಕ ಹಾಗೂ ರಾಜಕೀಯ ಪ್ರಹಸನಗಳನ್ನು ಮಾಡಹೊರಟಿರುವ ಹೊಸ ಸಂವೇದನೆಯ ಯೂಟ್ಯೂಬರ್‌ಗಳು, ಸ್ಟ್ಯಾಂಡ್–ಅಪ್ ಕಾಮಿಡಿಯನ್‌ಗಳೂ ಇದ್ದಾರೆ. ಬಿಯರ್ ಬಾಟಲ್ ವೇದಿಕೆಯತ್ತ ತೂರಿದ್ದು ಅಂಥದ್ದೇ ಕಾಮಿಡಿಯನ್ ಕಡೆಗೆ. 'ನಗೆ ಕ್ಲಬ್'ಗಳು ಸಂಸಾರ, ಹೆಂಡತಿ–ಗಂಡ, ಅತ್ತೆ–ಸೊಸೆಯರ, ಹಳ್ಳಿಗಾಡುಗಳ ಚರ್ವಿತ ಚರ್ವಣ ಹಾಸ್ಯವನ್ನು ಉಣಬಡಿಸುತ್ತಿರುವ ಹೊತ್ತಿನಲ್ಲಿ ಕುಮಾನ್ ಕಾಮ್ರ ತರಹದ ಹಾಸ್ಯಗಾರರು ಎದೆಗಾರಿಕೆಯಿಂದ ನಿಂತು ಸರ್ಕಾರದ ಕಾಲೆಳೆಯುವ ಚಟಾಕಿಗಳನ್ನು ಹಾರಿಸುತ್ತಿರುವುದು ಈ ಕಾಲಘಟ್ಟದಲ್ಲಿ ಸಾಹಸವೇ ಸರಿ. ಜಸ್ಪಾಲ್ ಭಟ್ಟಿ ಟೀವಿ ವಾಹಿನಿಗಾಗಿ ಎಂದೋ ತಯಾರಿಸಿದ್ದ 'ಎಂಎಲ್‌ಎಗಳನ್ನು ಕೊಂಡುಕೊಳ್ಳುವ, ಮಾರುವ ಏಜೆಂಟ್' ಎಂಬ ಹಾಸ್ಯದ ಪರಿಕಲ್ಪನೆ ಈ ಕಾಲಕ್ಕೂ ಹೇಗೆ ಸಲ್ಲುತ್ತದೆ ಅಲ್ಲವೇ?

ಇಷ್ಟಕ್ಕೂ ಹಾಸ್ಯ ಈಗ ಸುಲಭವಲ್ಲ; ಸ್ಟ್ಯಾಂಡ್–ಅಪ್ ಕಾಮಿಡಿಯನ್ ಆಗುವುದಂತೂ ಹರಿಕಥಾ ಪಠಣಕ್ಕಿಂತ ಧರ್ಮಸೂಕ್ಷ್ಮದ ಸವಾಲುಗಳನ್ನು ಒಳಗೊಳ್ಳತೊಡಗಿದೆ. ■

